


# ಮೂರ್ತ ಅಮೂರ್ತಗಳ ಪ್ರಕೃತಿ




ಕಲಾಕೃತಿಯೊಂದು ಅಂತಿಮವಾಗಿ ಗೆಲ್ಲಬೇಕಾಗಿರುವುದು ನೋಡುಗನ ಮನಸ್ಸನ್ನು. ಹಾಗೆ ಗೆಲ್ಲುವಾಗ ವಸ್ತು ಹೇಗೆ ಮುಖ್ಯವೋ, ಸಮರ್ಥ ಅಭಿವ್ಯಕ್ತಿಯೂ ಅಷ್ಟೇ ಮುಖ್ಯ. ಇಲ್ಲಿರುವ ತೈಲಚಿತ್ರಗಳನ್ನು ಗಮನಿಸಿ. ವ್ಯಕ್ತಿಕೇಂದ್ರಿತ ಭಾವಗಳ ಜತೆಗೆ ಪ್ರಕೃತಿ ತಳುಕು ಹಾಕಿಕೊಂಡಿರುವುದನ್ನು ಗಮನಿಸಿ. ಜತೆಗೆ ಬಣ್ಣಗಳು ಮೇಳೈಸಿ ಹೊಸ ಬಣ್ಣಗಳು ಹುಟ್ಟುವ ಕೈಚಳಕವೂ ಎದ್ದು ಕಾಣುತ್ತದೆ.

ಈ ಚಿತ್ರಗಳ ಕಲಾವಿದ ಬಿ.ಪಿ. ಕಾರ್ತಿಕ್ ಹಲವು ವರ್ಷಗಳಿಂದ ಬಣ್ಣದ ಲೋಕದಲ್ಲಿ ಕೈಯಾಡಿಸಿದವರು. ಬೆಂಗಳೂರು ಹೊರವಲಯದ ಈ ಕಲಾವಿದ ರೇಷ್ಮೆ ಉದ್ಯಮದಲ್ಲಿ ಬಟ್ಟೆ ಡಿಸೈನಿಂಗ್ ಕೆಲಸದಲ್ಲಿ ತೊಡಗಿಕೊಂಡಿದ್ದವರು. ಕಳೆದ ವರ್ಷದಿಂದ ಏಕವ್ಯಕ್ತಿ ಪ್ರದರ್ಶನಕ್ಕೆ ಇಳಿದಿದ್ದಾರೆ.

ಇಲ್ಲಿರುವ ಚಿತ್ರಗಳನ್ನೇ ಗಮನಿಸಿದರೆ, ಕಾರ್ತಿಕ್‌ಗೆ ಪ್ರಕೃತಿಯ ನಿಗೂಢತೆಯ ಕುರಿತು ಇರುವ ಒಲವು ಎದ್ದು ಕಾಣುತ್ತದೆ. ರೆಂಬೆ, ಕೊಂಬೆ, ಎಲೆ, ಮರ, ಮೋಡ, ನೀರು– ಎಲ್ಲವೂ ಒಂದರೊಳಗೊಂದು ಮಿಳಿತವಾಗಿ, ಪ್ರಕೃತಿ ರೂಪುಗೊಳ್ಳುವ ಇಲ್ಲಿನ ರೀತಿ ನಿಜಕ್ಕೂ ನವೀನ. ಅಮೂರ್ತಗಳನ್ನು ಒಟ್ಟುಗೂಡಿಸುತ್ತಲೇ ಪ್ರಕೃತಿ ಮೂರ್ತರೂಪ ಪಡೆಯುವುದು ಇಲ್ಲಿನ ವೈಶಿಷ್ಟ್ಯ.

(8ನೇ ಪುಟ ನೋಡಿ)